ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಬೆಂಗಳೂರು

**KARNATAKA STATE BAR COUNCIL**

(Statutory Body Constituted under the Advocates Act, 1961)

L. SRINIVASA BABU
Chairman

Old Election Commission Office,
Dr. Ambedkar Veedhi, Bangalore - 560 001.
Ph : 080-2286 8712/ 2286 8561
E-mail : kar_barcouncil@yahoo.com

KSBC/922/2021.

Dated 23/4/2021

ಗೆ,

ಅಧ್ಯಕ್ಷರು / ಕಾರ್ಯದರ್ಶಿ,
ವಕೀಲರ ಸಂಘ,

ಮಾನ್ಯರೇ,

**ವಿಷಯ : ರಾಜ್ಯದಲ್ಲಿ ಯುವ ವಕೀಲರ ಕರೋನಾ ಸಹಾಯ ಪಡೆ**

----------

ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಒಂದು ಸ್ವಾಯತ್ತತೆ ಸಂಸ್ಥೆಯಾಗಿದ್ದು, ವಕೀಲರ ಕಲ್ಯಾಣ/ಯೋಗಕ್ಷೇಮವನ್ನು ಕಾಪಾಡುವುದು ರಾಜ್ಯ ವಕೀಲರ ಪರಿಷತ್ತಿನ ಧ್ಯೇಯೋದ್ದೇಶವಾಗಿರುತ್ತದೆ ವಕೀಲರ ಹಿತರಕ್ಷಣೆ ಕಾಪಾಡಲು, ಪರಿಷತ್ತು ಸದಾ ಬದ್ಧವಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು ೧,೧೨,೦೦೦ಕ್ಕೂ ಹೆಚ್ಚು ವಕೀಲರಿದ್ದು ಹಾಗೂ ೧೯೯ ವಕೀಲರ ಸಂಘಗಳು ವಕೀಲರ ಕ್ಷೇಮಾಭಿವೃದ್ಧಿಗೆ ರಾಜ್ಯ ವಕೀಲರ ಪರಿಷತ್ತಿನ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ಸಮುದಾಯದ ಹಿತರಕ್ಷಣೆ ಮಾಡುವುದು ಪರಿಷತ್ತಿನ ಹಾಗೂ ಎಲ್ಲಾ ರಾಜ್ಯದ ವಕೀಲರ ಕರ್ತವ್ಯವಾಗಿರುತ್ತದೆ ಹಾಗೂ ವಕೀಲರೆಲ್ಲರೂ ಯೋದರಂತೆ ಎದೆಗುಂದದೆ ಆತ್ಮಸ್ಥೈರ್ಯದೊಂದಿಗೆ ಸಂಕಷ್ಟದ ಸಂದರ್ಭದಲ್ಲಿ ವಕೀಲರು ಹಾಗೂ ಕೊರೋನಾ ಪೀಡಿತರಿಗೆ ಆತ್ಮ ವಿಶ್ವಾಸ ತುಂಬಿ, ಸಹಾಯ ಹಸ್ತವನ್ನು ಚಾಚುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ತಮ್ಮೆಲ್ಲರಿಗೂ ತಿಳಿದಿರುವಂತೆ, ರಾಜ್ಯದಲ್ಲಿ ಕರೋನಾ ೨ನೇ ಅಲೆ ಅತ್ಯಂತ ತೀವ್ರತೆಯಿಂದ ಪ್ರಸರಿಸಿದ್ದು, ವಕೀಲರು ಸೇರಿದಂತೆ ಹಲವಾರು ಕರೋನಾ ಪೀಡಿತರು ಸಂಕಷ್ಟಗೀಡಾಗಿರುತ್ತಾರೆ. ಈ ಹಿನ್ನಲೆಯಲ್ಲಿ ವಕೀಲರಾದ ನಾವು ವಕೀಲರ ವೃತ್ತಿಯ ನೀತಿ ಶಾಸ್ತ್ರಗಳಲ್ಲೊಂದಾದ ಸಾಮಾಜಿಕ ಚಿಂತನೆ ಅತ್ಯಂತ ಪ್ರಮುಖವಾದದು. ಈ ಆಪತ್ ಕಾಲದಲ್ಲಿ, ನಾವುಗಳು

....೨

Scanned with CamScanner

ಸಾಮಾಜಿಕ ಜಾಲತಾಣದಲ್ಲಿ, ದೂರದರ್ಶನಗಳಲ್ಲಿ ಕಂಡ ಹಾಗೆ ವೈದ್ಯಕೀಯ ಸಹಾಯವಿಲ್ಲದ ಅಸಹಾಯಕರು, ಆಮ್ಲಜನಕ ದೊರೆಯದ ಅಸಹಾಯಕರು, ಹಾಸಿಗೆ ಸಿಗುತ್ತಿಲ್ಲವೆಂದು ಪರಿತಪಿಸುವ ವಯೋವೃದ್ದರು, ಆಸ್ಪತ್ರೆಯು ದೊರಕಿ, ಆಹಾರಕ್ಕಾಗಿ ಪರದಾಡುವ ರೋಗಿಗಳು. ಇದನ್ನೇ ಬಂಡವಾಳ ಮಾಡಿಕೊಂಡ ಆಂಬುಲೆನ್ಸ್ ಮಾಲೀಕರು ಹಾಗೂ ಚಾಲಕರು, ಶವ ಸಂಸ್ಕಾರ ಮಾಡಲಾಗದೇ ಅಸಹಾಯಕರಾಗಿ ನೊಂದವರು, ಮಾನದಂಡವಿಲ್ಲದೇ ಹಣ ಪೀಕುತ್ತಿರುವ ಖಾಸಗಿ ಆಸ್ಪತ್ರೆಗಳು, ಹೆತ್ತಮಕ್ಕಳನ್ನು ಕಳೆದುಕೊಂಡು ನಿರ್ಗತಿಕರಾದ ವಯೋವೃದ್ದರನ್ನು ಕಾಣುತ್ತಿದ್ದೇವೆ.

ಇಂತಹ ಸಂದರ್ಭಗಳಲ್ಲಿ ನೊಂದವರಿಗಾಗಿ, ಅಸಹಾಯಕರಿಗೆ ಸಹಾಯ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ. ಜಿಲ್ಲಾ ಹಾಗೂ ತಾಲೂಕು ಮಟ್ಟಗಳಲ್ಲಿ ಕೋವಿಡ್ ನಿರ್ವಹಣೆಗೆ ವಕೀಲರು, ಯುವ ವಕೀಲರ ಸಹಾಯ ಪಡೆಯನ್ನು ರಚಿಸಿಕೊಂಡು, ಹಿರಿಯ ವಕೀಲರ ಮಾರ್ಗದರ್ಶನದೊಂದಿಗೆ ಸಂಘಟಿತರಾಗಿ, ಸೂಕ್ತ ಅಧಿಕಾರಿಗಳು ಮತ್ತು ಜನ-ಪ್ರತಿನಿಧಿಗಳೊಂದಿಗೆ ಚರ್ಚಿಸಿ, ನೊಂದವರಿಗೆ ಸಹಾಯ ಮಾಡಬೇಕಾಗಿದೆ. ಇದು ನಮ್ಮ ಆದ್ಯ ಕರ್ತವ್ಯ.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ತನ್ನ ಎಲ್ಲಾ ಸದಸ್ಯರೊಂದಿಗೆ ಕಾರ್ಯನಿರ್ವಹಿಸುತ್ತಿದೆ. ರಾಜ್ಯದಲ್ಲಿ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ .

ಈ ನಮ್ಮ ಮನವಿಯನ್ನು ಮನ್ನಿಸಿ, ತಾವೆಲ್ಲರೂ ಅತ್ಯಂತ ಕಾಳಜಿಯಿಂದ ಭಾಗವಹಿಸಿ ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕೆಂದು ಈ ಮೂಲಕ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

( ಎಲ್. ಶ್ರೀನಿವಾಸ ಬಾಬು)
ಅಧ್ಯಕ್ಷರು

Scanned with CamScanner